International Journal of Kannada Research 2024; 10(3): 95-97

International Journal of Kannada Research
www.kannadajournal.com

ISSN: 2454–5813
IJKR 2024; 10(3): 95-97
© 2024 IJKR
www.kannadajournal.com
Received: 22-05-2024
Accepted: 26-06-2024

**ರುಜುವಾನ್ ಕೆ.**
ಸಂಶೋಧನಾ ವಿದ್ಯಾರ್ಥಿ ಕನ್ನಡ ಅಧ್ಯಯನ ವಿಭಾಗ ಮತ್ತು ಸಂಶೋಧನಾ ಕೇಂದ್ರ ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ, ಕರ್ನಾಟಕ, ಭಾರತ

**ಡಾ.ಹೆಚ್.ವಿಶ್ವನಾಥ್**
ಸಹ ಪ್ರಾಧ್ಯಾಪಕರು ಕನ್ನಡ ಅಧ್ಯಯನ ವಿಭಾಗ ಮತ್ತು ಸಂಶೋಧನಾ ಕೇಂದ್ರ ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ, ಕರ್ನಾಟಕ, ಭಾರತ

**Corresponding Author:**
**ರುಜುವಾನ್ ಕೆ.**
ಸಂಶೋಧನಾ ವಿದ್ಯಾರ್ಥಿ ಕನ್ನಡ ಅಧ್ಯಯನ ವಿಭಾಗ ಮತ್ತು ಸಂಶೋಧನಾ ಕೇಂದ್ರ ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ, ಕರ್ನಾಟಕ, ಭಾರತ

# ಚಿತ್ರದುರ್ಗದ ಪಾಳೆಯಗಾರ ಕಾಲದಿಂದಲೂ ಪ್ರಚಲಿತದಲ್ಲಿರುವ ಖಾಸಬೇಡರ ಪಡೆ ಕುಣಿತ

**ರುಜುವಾನ್ ಕೆ., ಡಾ.ಹೆಚ್.ವಿಶ್ವನಾಥ್**

**ಪೀಠಿಕೆ**

ಚಿತ್ರದುರ್ಗವನ್ನು ಆಳಿದ ಪಾಳಿಯಗಾರರ ಕಾಲದಲ್ಲಿ ಪ್ರಚಲಿತದಲ್ಲಿದ್ದ ಒಂದು ಪ್ರಸಿದ್ಧವಾದ ನೃತ್ಯ ಪ್ರಧಾನ ಕಲೆಯಾಗಿ ಖಾಸಬೇಡರ ಪಡೆಯ ಕುಣಿತವನ್ನು ಕಾಣಬಹುದು. ಇದೊಂದು ಯುದ್ಧ ಕಲೆಯಾಗಿದ್ದು, ಪಾಳೆಯಗಾರರ ಕಾಲದ ಸೈನ್ಯ ವ್ಯವಸ್ಥೆಯಲ್ಲಿ ಬೇಡ ಅಥವಾ ನಾಯಕ ಜನಾಂಗದ ಖಾಸಬೇಡ ಪಡೆಗೆ ವಿಶೇಷವಾದ ಸ್ಥಾನಮಾನವಿತ್ತು. ಈ ಪಡೆಯು ಯುದ್ಧದ ಸಂದರ್ಭದಲ್ಲಿ ವಿಜಯ ಸಾಧಿಸಿದ ಪ್ರತೀಕವಾಗಿ ಕಲಾತ್ಮಕವಾಗಿ ಕುಣಿದು ಸಂತಸ ಅಭಿವ್ಯಕ್ತಿಸುತ್ತಿದ್ದ ಕಲೆಯಾಗಿದೆ.

ಖಾಸಬೇಡರ ಪಡೆ ಎಂದರೆ ರಾಜನ ಅತ್ಯಂತ ನಿಷ್ಠಾವಂತ, ನಂಬಿಕಸ್ಥ ಪಡೆಯಾಗಿದೆ. ಇಂತಹ ರಾಜನ ಆಪ್ತ ಪಡೆಗಳು ಪ್ರಾಚೀನ ಕಾಲದಿಂದಲೂ ಇರುವುದು ಇತಿಹಾಸದ ಅಧ್ಯಯನದಿಂದ ನಮಗೆ ತಿಳಿದು ಬರುತ್ತದೆ. ಅದರಂತೆ ಚಿತ್ರದುರ್ಗದ ಪರಿಸರದಲ್ಲಿ ಇಲ್ಲಿನ ಪಾಳೆಯಗಾರ ಅರಸರಾದ ರಾಜಾ ಬಿಚ್ಚುಗತ್ತಿ ಭರಮಣ್ಣ ನಾಯಕ, ಕಸ್ತೂರಿ ರಂಗಪ್ಪ ನಾಯಕ, ಹಿರೇ ಮದಕರಿ ನಾಯಕ, ರಾಜಾವೀರ ಮದಕರಿ ನಾಯಕರ ಆಳ್ವಿಕೆಯ ಅವಧಿಯಲ್ಲಿ ಆಪ್ತ ರಕ್ಷಣಾ ಪಡೆಯಿದ್ದು, ಇದನ್ನೇ ಚಿತ್ರದುರ್ಗ ಇತಿಹಾಸ ಪ್ರಸಿದ್ಧ 'ಖಾಸಬೇಡರ ಪಡೆ' ಎಂದು ಕರೆಯಲಾಗುತ್ತದೆ. ಇಂತಹ ರಾಜನ ಆಪ್ತ ಪಡೆಯು ರಾಜನಿಗಾಗಿ ಮತ್ತು ರಾಜ್ಯಕ್ಕಾಗಿ ಎಂಥಹದ್ದೇ ತ್ಯಾಗವನ್ನು ಮಾಡಲು ಸದಾ ಸಿದ್ಧವಿರುತ್ತಿದ್ದರು. ಬೇಡ ಅಥವಾ ನಾಯಕ ಜನಾಂಗದ ಈ ಪಡೆಗೆ ರಾಜ್ಯದಲ್ಲಿ ವಿಶೇಷ ಸ್ಥಾನಮಾನ ಮತ್ತು ಗೌರವಾದರಗಳು ಇದ್ದವು. ರಾಜರು ಎಳ್ಳಷ್ಟೂ ಶಂಕೆಯಿಲ್ಲದೆ ನಂಬುತ್ತಿದ್ದದ್ದು ಖಾಸಬೇಡರ ಪಡೆಯನ್ನೇ.

ಖಾಸಬೇಡರ ಪಡೆ ಕೇವಲ ರಾಜನ ಅಂಗರಕ್ಷಕ ಪಡೆಯಾಗಿ ಮಾತ್ರವಿರದೆ ಕೋಟೆಯ ಆಡಳಿತಾತ್ಮಕ ಕಾರ್ಯಗಳಲ್ಲಿಯೂ ತೊಡಗಿಕೊಂಡಿದ್ದರು. ವಿಶೇಷವಾಗಿ "ಕೋಟೆಯ ಆಯಕಟ್ಟಿನ ಸ್ಥಳಗಳ ಗಸ್ತು ಹೊಡೆಯುವುದು, ಸೆರೆಮನೆಯ ಕಾವಲು ಕಾಯುವುದು ಮಾಡುತ್ತಿದ್ದರು. ಇದಲ್ಲದೆ ಆನೆಗಳನ್ನು ಪಳಗಿಸುವ ಹಾಗೂ ಯುದ್ಧಗಳಲ್ಲಿ ಹೋರಾಡುವ ಸೈನಿಕರಿಗೆ ತರಬೇತಿ ನೀಡುವ ಕಾರ್ಯವನ್ನು ಈ ಪಡೆ ನಿರ್ವಹಿಸುತ್ತಿತ್ತು. ಯುದ್ಧದ ಸಂದರ್ಭದಲ್ಲಿ ಸಾಂಪ್ರದಾಯಿಕ ಪದ್ಧತಿಯನ್ನು ಇವರು ಅನುಸರಿಸದೇ ಬುಡಕಟ್ಟು ಶೈಲಿಯಲ್ಲಿ ಗೆರಿಲ್ಲಾ ಯುದ್ಧ ತಂತ್ರವನ್ನು ಅಳವಡಿಸಿಕೊಂಡಿದ್ದರು."[೧] ಗೆರಿಲ್ಲಾ ಯುದ್ಧ ತಂತ್ರದಲ್ಲಿ ನಿಪುಣರಿದ್ದ ಇವರು, ಶತ್ರು ಸೈನ್ಯವನ್ನು ಮಣಿಸಿ ಜಯಗಳಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದರು. ಬಹುಮುಖ್ಯವಾಗಿ ಖಾಸಬೇಡರ ಪಡೆಯ ಯುದ್ಧ ತಂತ್ರಗಳಿಂದಲೇ ಯುದ್ಧವನ್ನು ಗೆದ್ದ ಹಲವು ಸಂದರ್ಭಗಳಿವೆ. ಆಗ ಈ ಪಡೆಯು ರಣಕೇಕೆ ಹಾಕಿ ಅತ್ಯಂತ ಸಡಗರ ಸಂಭ್ರಮದಿಂದ ತಮ್ಮ ತಮ್ಮ ಆಯುಧಗಳನ್ನಿಡಿದು ವಿಶೇಷವಾದ ನರ್ತನವನ್ನು ಮಾಡುತ್ತಿದ್ದರು. ಹೀಗೆ ವಿಜಯ ಸಾಧಿಸಿದ ಹಿನ್ನೆಲೆಯಾಗಿ ಹುಟ್ಟಿಕೊಂಡಂತಹ ಕುಣಿತವೇ ಖಾಸಬೇಡರ ಪಡೆಯ ಕುಣಿತ.

ಪಾಳೆಯಗಾರರ ಅವನತಿಯ ನಂತರ ಆಶ್ರಯ ಸಿಗದ ಈ ಜನಾಂಗವು ಜಿಲ್ಲೆಯ ಬೇರೆ ಬೇರೆ ಹಳ್ಳಿಗಳಿಗೆ ಚದುರಿ ಹೋಗಿ ಅಲ್ಲಿ ನೆಲೆ ಕಂಡು, ತಮ್ಮ ಯುದ್ಧ ಸಂದರ್ಭದ ಕುಣಿತವನ್ನು ಮಾಡುವದೇ ಬಿಟ್ಟಿರುತ್ತಾರೆ. ಸೈನ್ಯದಲ್ಲಿ ಸೇವೆ ಸಲ್ಲಿಸಿ ಯುದ್ಧ ಸಂದರ್ಭದಲ್ಲಿ ಹೋರಾಡಿ ಕುಣಿದು ಆನಂದ ಪಡುತ್ತಿದ್ದ ಈ ತಲೆಮಾರು ನಶಿಸಿಹೋದ ಬಳಿಕ ಇವರ ಮುಂದಿನ ಪೀಳಿಗೆಯು ಹಿಂದಿನವರ ಖಾಸಬೇಡ ಪಡೆಯ ಕುಣಿತಕ್ಕೆ ಬಳಸುತ್ತಿದ್ದ ವಸ್ತ್ರವೇಷಭೂಷಣ ಹಾಗೂ ಯುದ್ಧ ಪರಿಕರಗಳನ್ನು ಸಂರಕ್ಷಿಸಿಕೊಂಡಿರುತ್ತಾರೆಯೇ ವಿನಃ ಈ ಬಗೆಯ ಕುಣಿತವನ್ನು ಮಾಡುತ್ತಿರಲಿಲ್ಲ.

ಚಿತ್ರದುರ್ಗದ ಇತಿಹಾಸ ಅಧ್ಯಾಪಕರಾದ ಡಿ.ಬೋರಪ್ಪ ಹಾಗೂ ಕಲಾವಿದ ಜಿ.ರಾಜಣ್ಣನವರು ಮದಕರಿ ನಾಯಕರ ವಂಶಸ್ಥರಾದ ಟಿ.ಎನ್.ಗಂಡುಗಲಿ ಎಂಬುವರನ್ನು ಬೇಟಿಯಾಗಿ ಈ ಖಾಸಬೇಡರ ಪಡೆಯ ಬಗ್ಗೆ ಮಾಹಿತಿ ಪಡೆಯುತ್ತಾರೆ. ಈ ಜನಾಂಗದ ಕೆಲವರು ಚಳ್ಳಕೆರೆಯ ಮುತ್ತುಗಾರನಹಳ್ಳಿಯಲ್ಲಿ ವಾಸವಿರುವುದನ್ನು ಶೋಧಿಸಿ ಖಾಸಬೇಡರ ಪಡೆಯ ವಸ್ತ್ರ ವೇಷಭೂಷಣದ ಪರಿ ಹೇಗೆ? ಯಾವ ಯಾವ ಬಗೆಯ ಯುದ್ಧ ಸಾಮಗ್ರಿಗಳನ್ನು ಬಳಸುತ್ತಿದ್ದರು ಹಾಗೂ ಈ ಖಾಸಬೇಡ ಪಡೆಯ ಕುಣಿತದ ಧಾಟಿ ಹೇಗಿತ್ತು ಎಂಬ ಮಾಹಿತಿಗಳನ್ನು ಮೊಟ್ಟ ಮೊದಲ ಬಾರಿಗೆ ಕಲೆ ಹಾಕುತ್ತಾರೆ.

ಖಾಸಬೇಡ ಪಡೆಯ ಕುಣಿತ ಒಂದು ಯುದ್ಧ ಕಲೆಯಾಗಿರುವುದರಿಂದ ಈ ಕುಣಿತದಲ್ಲಿ ಖಡ್ಗಗಳು, ಗಂಡುಗೊಡಲಿ, ಭರ್ಜಿ, ಮುಳ್ಳಿನ ಮುಷ್ಠಿ, ದೊಡ್ಡ ಮಚ್ಚು, ಚಂದ್ರಾಯುಧ, ಕತ್ತಿ ಗುರಾಣಿ, ಬಿಲ್ಲು ಬಾಣಗಳನ್ನು ಬಳಸಲಾಗುತ್ತದೆ. ಒಂದೂವರೆ ಅಡಿಯಷ್ಟು ಉದ್ದವಿರುವ ಗಂಡುಗೊಡಲಿಯು ಅರ್ಧ ಚಂದ್ರಾಕಾರದಲ್ಲಿದ್ದು ಇದಕ್ಕೆ ಎರೆಡು ಅಡಿಯಷ್ಟು ಉದ್ದದ ಬೇವಿನ ಕಟ್ಟಿಗೆಯ ಕಾವು ಹಾಕಿರಲಾಗಿರುತ್ತದೆ. ಖಡ್ಗಗಳು ಸುಮಾರು ಎರಡರಿಂದ ಮೂರು ಅಡಿ ಉದ್ದ, ಗುರಾಣಿ ಒಂದೂವರೆ ಅಡಿಯಷ್ಟು ವ್ಯಾಸ, ಭರ್ಜಿ ಸುಮಾರು ಆರು ಅಡಿಯಷ್ಟು ಉದ್ದವಿರುತ್ತದೆ. ಈ ಎಲ್ಲಾ ಯುದ್ಧ ಪರಿಕರಗಳನ್ನು ಇಂದಿನ ಖಾಸಬೇಡರ ಪಡೆಯ ಕುಣಿತದ ಕಲಾವಿದರು ನೃತ್ಯ ಪ್ರದರ್ಶನದ ಸಂದರ್ಭದಲ್ಲಿ ತಮ್ಮ ತಮ್ಮ ಕೈಯಲ್ಲಿ ಆಯುಧಗಳಿನ್ನಿಡಿದು ವೀರ ನರ್ತನವನ್ನು ಮಾಡುತ್ತಾರೆ.

ಇನ್ನೂ ಈ ಪಡೆಯ ವೇಷಭೂಷಣವು ಎಲ್ಲರಿಗೂ ಒಂದೇ ರೀತಿಯ ಬಿಳಿ ನಿಕ್ಕರ್ ಅಥವಾ ಚಣ್ಣ(ಎಳೆದು ಕಟ್ಟಿದ ಕಚ್ಚೆ) ಇರುತ್ತದೆ. ತಲೆಗೆ ಬಿಳಿ ಪೇಟ, ಹೆಗಲ ಮೇಲೊಂದು ಕರಿಯ ಕಂಬಳಿ, ಕಾಲಿಗೆ ಮತ್ತು ಕೈಗೆ ಕಡಗ, ಕೊರಳಲ್ಲಿ ಹಾಗೂ ಕೈ ತೋಳಿನಲ್ಲಿ ತಾಯಿತ, ಜೊತೆಗೆ ಕಪ್ಪು ಬಿಳಿ ಕಂಬಳಿ ಉಣ್ಣೆಯಿಂದ ಹೊಸೆದ ಹಾರ ಇರುತ್ತದೆ. ಈ ಹಾರವನ್ನು ಜನಿವಾರದಂತೆ ತಮ್ಮ ಹೆಗಲಿನಲ್ಲಿ ಇಳಿಬಿಟ್ಟುಕೊಂಡಿರುತ್ತಾರೆ. ಈ ರೀತಿಯ ವೇಷಭೂಷಣಗಳೊಂದಿಗೆ ವಿವಿಧ ಆಯುಧಗಳನ್ನು ಕೈಯಲ್ಲಿ ಹಿಡಿದು ನಾಲ್ಕೈದು ತಮಟೆಗಳ ಮೇಳದ ಗತ್ತಿಗೆ ತಕ್ಕಂತೆ ಯುದ್ಧ ಗೆದ್ದ ವಿಜಯೋತ್ಸವದ ರೀತಿಯಲ್ಲಿ ಇಂದಿನ ಕಲಾವಿದರು ರಣಕೇಕೆ ಹಾಕುತ್ತಾ ಕುಣಿಯುತ್ತಾರೆ. ಇದನ್ನೇ ಖಾಸಬೇಡರ ಪಡೆಯ ಕುಣಿತ ಎಂದು ಕರೆಯಲಾಗುತ್ತದೆ.

ಪುರುಷ ಪ್ರಧಾನವಾದ ಈ ಯುದ್ಧ ಕಲೆಯು "ಪಾಳೆಯಗಾರರ ಕಾಲದಲ್ಲಿ ಶತ್ರು ಸೈನ್ಯವನ್ನು ಸಂಹರಿಸಿದ ನಂತರ ಅವರ ತಲೆಗಳನ್ನು ಕಡಿದು ತಂದು ಒಂದೆಡೆ ರಾಶಿ ಹಾಕಿ ಅದರ ಎದುರಲ್ಲಿ ರಾಜನನ್ನು ಸಿಂಹಾಸನದ ಮೇಲೆ ಕುಳ್ಳಿರಿಸಿ, ರಕ್ತಾಭಿಷೇಕ ಮಾಡಿ, ಖಾಸಬೇಡ ಪಡೆಯವರು ಸಂಭ್ರಮಿಸುತ್ತಾ ಕುಣಿಯುತ್ತಿದ್ದರು. ಇದು ಮುಂದುವರೆದು ಯುದ್ಧಕ್ಕೆ ಹೊರಡುವ ಮುನ್ನ ಹಾಗೂ ಯುದ್ಧ ನಂತರದಲ್ಲಿ ಖಾಸಬೇಡ ಪಡೆಯ ನೃತ್ಯವು ರೂಢಿಗೆ ಬಂದು ಯುದ್ಧ ಸಂದರ್ಭದ ಪ್ರಸಿದ್ಧ ಕುಣಿತವಾಗಿ ಪ್ರಚಲಿತದಲ್ಲಿತ್ತು"[೨] ಎಂದು ಹೇಳಲಾಗುತ್ತದೆ.

ಪ್ರಸ್ತುತ ದಿನಮಾನಗಳಲ್ಲಿ ಅವನತಿ ಹೊಂದಿದ್ದ ಈ ಕಲೆಯು ಚಿತ್ರದುರ್ಗದ ಕಲಾಪ್ರೇಮಿ ಜಿ.ರಾಜಣ್ಣನವರಿಂದ ಮರು ಹುಟ್ಟು ಪಡೆದು ನಗರದ ಮತ್ತು ಅಕ್ಕಪಕ್ಕದ ಹಳ್ಳಿಯ ನಾಯಕ ಸಮುದಾಯದ ಮತ್ತು ಇತರೆ ಸಮುದಾಯದ ಆಸಕ್ತ ಯುವಕರು ಸೇರಿ, ಈ ನೃತ್ಯದ ತರಬೇತಿ ಪಡೆದು ಹಿಂದಿನ ಖಾಸಬೇಡ ಪಡೆಯು ಕುಣಿಯುತ್ತಿದ್ದ ಮಾದರಿಯಲ್ಲಿಯೇ ಇಂದಿನ ಸಭೆ ಸಮಾರಂಭಗಳಲ್ಲಿ, ಜಾನಪದ ಉತ್ಸವಗಳಲ್ಲಿ, ಜಾನಪದ ಮೇಳಗಳಲ್ಲಿ, ಗಣೇಶೋತ್ಸವ, ವಾಲ್ಮಿಕಿ ಜಯಂತಿ, ಮದಕರಿ ನಾಯಕ ಜಯಂತಿ ಮೊದಲಾದ ಸಂದರ್ಭಗಳಲ್ಲಿ ಕುಣಿತದ ಪ್ರದರ್ಶನ ಮಾಡುತ್ತಾ ಬಂದಿರುತ್ತಾರೆ.

ಕಲಾ ಪ್ರದರ್ಶನಕ್ಕೆ ನಿಯೋಜಿತವಾದ ಸ್ಥಳಕ್ಕೆ ಅರ್ಧ ತಾಸು ಮುಂಚಿತವಾಗಿಯೇ ಬಂದು ತಮ್ಮ ವೇಷಭೂಷಣಗಳನ್ನು ತೊಟ್ಟು, ಕೈಯಲ್ಲಿ ಆಯುಧಗಳನ್ನು ಹಿಡಿದು ವಾದ್ಯಮೇಳಗಳ ಜೊತೆಗೂಡಿ ಮೆರವಣಿಗೆಯುದ್ದಕ್ಕೂ ಸಾಗುತ್ತಾ ಕುಣಿಯುವ ಪ್ರಕಾರವಾಗಿ ಖಾಸಬೇಡರ ಪಡೆಯ ನೃತ್ಯವನ್ನು ಕಾಣಬಹುದು. ಈ ಕುಣಿತಕ್ಕೆ ಕನಿಷ್ಟ ನಾಲ್ಕೈದು ತಮಟೆಗಳ ಸದ್ದು ಬೇಕಾಗುತ್ತದೆ. ಕೆಲವೊಮ್ಮೆ ಸಮ್ಮಾಳ ಇಲ್ಲವೇ ನಾಸಿಕ್ ಡೋಲು ಮೇಳವನ್ನು ಬಳಸಲಾಗುತ್ತದೆ. ಈ ವಾದ್ಯಮೇಳಗಳ ಸದ್ದಿಗೆ ಸುಮಾರು ಇಪ್ಪತ್ತರಿಂದ ಮೂವತ್ತು ಜನ ಕಲಾವಿದರು ಖಾಸಬೇಡರ ಪಡೆಯ ವಸ್ತ್ರವೇಷಭೂಣಗಳನ್ನು ಧರಿಸಿ, ಕೈಯಲ್ಲಿ ಆಯುಧಗಳನ್ನು ಹಿಡಿದು ವಾದ್ಯಮೇಳದ ಸದ್ದಿನ ಗತ್ತಿಗೆ ತಕ್ಕಂತೆ ವಿವಿಧ ಭಂಗಿಗಳಲ್ಲಿ ಕುಣಿಯುತ್ತಾರೆ. ಜೋರಾಗಿ ಕೇಕೆ ಹಾಕಿ, ಶಿಳ್ಳೆ ಹೊಡೆದು ಕುಣಿಯುವ ಇವರು ಸಾಲುಗಟ್ಟಿ ನಿಂತು ಹದವಾಗಿ ಎರಡೆಜ್ಜೆ, ಮೂರೆಜ್ಜೆ ಹಿಂದಕ್ಕೆ ಮುಂದಕ್ಕೆ ಹೋಗಿ ಬರುವುದು, ಮೇಲಕ್ಕೆ ಕುಪ್ಪಳಿಸಿ ಕೇಕೆ ಹಾಕಿ ಕುಣಿಯುವುದು, ತಟ್ಟನೆ ಕುಂತು ನಿಲ್ಲುವುದು, ಯುದ್ಧದ ದೃಶ್ಯಗಳನ್ನು ತೋರಿಸುವುದು, ಕೊಡಲಿ, ಮಚ್ಚು, ಕತ್ತಿಗಳನ್ನು ಬೀಸುವುದು, ವೀರಯೋಧನ ಯುದ್ಧ ಭಂಗಿಗಳನ್ನು ತೋರಿಸುವುದು ಮಾಡುತ್ತಾರೆ. ನಾಲ್ಕು ನಾಲ್ಕು ಜನ ಎದುರು ಬದುರು ನಿಂತು ಕತ್ತಿ ಬೀಸಿ ಶತ್ರುವನ್ನು ಹಿಮ್ಮೆಟ್ಟಿಸುವಂತೆ, ಕತ್ತಿಯ ಹೊಡೆತದಿಂದ ಗುರಾಣಿ ಅಡ್ಡಲಾಗಿ ಇಟ್ಟು ರಕ್ಷಿಸಿಕೊಂಡಂತೆಯೂ ಅಭಿನಯಿಸುತ್ತಾರೆ.

ಕುಣಿತದ ಆರಂಬದಲ್ಲಿ ನಿಧಾನಗತಿಯಿಂದ ಆರಂಭವಾದ ಖಾಸಬೇಡರ ಪಡೆಯ ಕುಣಿತ ಮಧ್ಯಂತರದಲ್ಲಿ ತನ್ನ ವೇಗವನ್ನು ಹೆಚ್ಚಿಸಕೊಳ್ಳುತ್ತಾ ಕೊನೆ ಕೊನೆಗೆ ವಿಪರೀತ ಜೋರಾಗಿ ವೀರಾವೇಶದಿಂದ ಕುಣಿಯುವುದು ನೋಡುಗರ ಕಣ್ಮನ ಸೆಳೆಯುತ್ತದೆ. ಹೀಗೆ ಮೆರವಣಿಗೆಯ ಉದ್ದಕ್ಕೂ ಕುಣಿಯುತ್ತ ಸಾಗುವ ಕಲಾವಿದರು ಸುಮಾರು ಆರೇಳು ಗಂಟೆಗಳ ಕಾಲ ಕುಣಿತದ ಪ್ರದರ್ಶನವನ್ನು ನೀಡುತ್ತಾರೆ.

ಚಿತ್ರದುರ್ಗದ ಪರಿಸರದಲ್ಲಿ ಜಿಲ್ಲೆಯ ನಗರ ಕೇಂದ್ರ, ಹಲ್ಲೂರು, ಗಂಜಿಗಟ್ಟೆ, ಚಳ್ಳಕೆರೆಯ ದೊಡ್ಡಚೆಲ್ಲೂರು ಹಳ್ಳಿಗಳಲ್ಲಿ ಈ ಕುಣಿತದ ಕಲಾವಿದರುಗಳು ಇರುತ್ತಾರೆ. ನಗರದ ಖಾಸಬೇಡರ ಪಡೆಯ ಕುಣಿತದ ಕಲಾವಿದರಾದ ಜಿ.ರಾಜಣ್ಣನವರು 'ಚಿತ್ರದುರ್ಗ ಜಿಲ್ಲಾ ಜಾನಪದ ಕಲಾ ಮಂಡಲ' ಎಂಬ ಸಂಸ್ಥೆಯನ್ನು ಸ್ಥಾಪಿಸಿ ಇದರ ಅಡಿಯಲ್ಲಿ ಅಕ್ಕಪಕ್ಕದ ಹಳ್ಳಿಯ ನೂರಾರು ಜನ ಯುವಕರಿಗೆ ಈ ಕಲೆಯ ನೈಪುಣ್ಯತೆಯನ್ನು ಕಲಿಸಿಕೊಟ್ಟಿರುತ್ತಾರೆ. ಈ ಕಲಾ ಮಂಡಲದ ವತಿಯಿಂದ ನಗರದಲ್ಲಿ ನಡೆಯುವ ಮದಕರಿ ನಾಯಕ ಜಯಂತಿ, ಮದಕರಿ ನಾಯಕರ ಪುಣ್ಯಸ್ಮರಣೆ, ವಾಲ್ಮಿಕಿ ಜಯಂತಿ, ಗ್ರಾಮದೇವತೆಯ ಜಾತ್ರೋತ್ಸವ, ದಸರಾ ಮೆರವಣಿಗೆ, ಗಣೇಶೋತ್ಸವದ ಮೆರವಣಿಗೆ ಮೊದಲಾದ ಸಂದರ್ಭಗಳಲ್ಲಿ ಖಾಸಬೇಡರ ಪಡೆಯ ಕುಣಿತದ ಪ್ರದರ್ಶನವನ್ನು ನೀಡುತ್ತಾ ಬಂದಿರುತ್ತಾರೆ. ಚಿತ್ರದುರ್ಗ ಜಿಲ್ಲೆಯಲ್ಲಿ ಮಾತ್ರವಲ್ಲದೆ ಹೊರ ಜಿಲ್ಲೆಗಳಾದ ತುಮಕೂರು, ಬೆಂಗಳೂರು, ಶಿವಮೊಗ್ಗ ಹಾಗೂ ಹೊರ ರಾಜ್ಯಗಳಾದ ನಾಗಪುರ, ಪುಣೆ, ದೆಹಲಿಗಳಲ್ಲಿಯೂ ಸಹ ಈ ಕುಣಿತದ ಪ್ರದರ್ಶನವನ್ನು ನೀಡಿರುತ್ತಾರೆ.

ಅವಸಾನ ಕಂಡು ಚರಿತ್ರೆಯ ಪುಟ ಸೇರಿದ್ದ ಖಾಸಬೇಡರ ಪಡೆಯ ಕುಣಿತವನ್ನು ಪುನರುತ್ತಾನಗೊಳಿಸಿ ಈ ನೆಲದ ಸಾಂಸ್ಕೃತಿಕ ಕಲೆಯೊಂದಕ್ಕೆ ಮರುಹುಟ್ಟು ನೀಡುವಲ್ಲಿ ಜಿಲ್ಲೆಯ ಸಾಂಸ್ಕೃತಿಕ ಕಲಾ ತಂಡದ ಮಾಲಿಕರಾದ ಜಿ.ರಾಜಣ್ಣನವರ ಪರಿಶ್ರಮ ಅಪಾರ. ಹಾಗೆಯೇ ಈ ಕಲೆ ಹೆಚ್ಚು ಜನಪ್ರಿಯಗೊಂಡು ನಗರವನ್ನು ದಾಟಿ ಹುಲ್ಲೂರು, ಗಂಜಿಗಟ್ಟೆ, ದೊಡ್ಡಚೆಲ್ಲುರು ಮೊದಲಾದ ದೂರದ

ಹಳ್ಳಿಗಳಿಗೂ ಪಸರಿಸಿ ತನ್ನ ಅಸ್ಮಿತೆಯನ್ನು ಉಳಿಸಿಕೊಂಡು ಮುಂದುವರೆಯುತ್ತಿರುವುದು ಸಂತಸದ ಸಂಗತಿಯಾಗಿದೆ. ಇಂದಿನ ಆಧುನಿಕ ಯುಗಮಾನದಲ್ಲಿ ಕೋಲಾಟದಂತಹ ಜನಸಾಮಾನ್ಯರ ನಿತ್ಯ ಬದುಕಿನ ಕಲೆಗಳೇ ಅವನತಿ ಹಾದಿ ಹಿಡಿಯುತ್ತಿರುವಾಗ ಪಾಳೆಯಗಾರರ ಕಾಲದ ಕಲಾಕೃತಿಯೊಂದು ಮರುಜನ್ಮ ತಾಳಿ ಇಂದಿಗೂ ಪ್ರದರ್ಶನವನ್ನು ಕಾಣುತ್ತಿರುವುದು ಡಿ.ಬೋರಪ್ಪ, ಜಿ.ರಾಜಣ್ಣ ಹಾಗೂ ಇತರೆ ಹಳ್ಳಿಗಳ ಖಾಸಬೇಡರ ಪಡೆಯ ಕಲಾವಿದರುಗಳ ಕಾರಣದಿಂದಾಗಿ ಮಾತ್ರ. ಇವರ ಈ ಕಾರ್ಯ ನಿಜಕ್ಕೂ ಶ್ಲಾಘನೀಯ.

**ಟಿಪ್ಪಣಿಗಳು**

1. ಚಿತ್ರದುರ್ಗ ಪಾಳೆಯಗಾರರ ಕಾಲದ ಸೈನ್ಯ ವ್ಯವಸ್ಥೆ ಮತ್ತು ಯುದ್ಧ ನೀತಿ : ಒಂದು ಅಧ್ಯಯನ (ಪಿಹೆಚ್.ಡಿ ಮಹಾ ಪ್ರಬಂಧ) – ಆರ್.ಶಿವಪ್ಪ, ಪು.ಸಂ–೯೧
2. ಜಿ.ರಾಜಣ್ಣ – ಕೋಳಿ ಬುರುಜನಹಟ್ಟಿ, ಚಿತ್ರದುರ್ಗ, ಇವರ ಸಂದರ್ಶನದ ಆಯ್ದ ಭಾಗ

**ಪಿಹೆಚ್.ಡಿ ಮಹಾಪ್ರಬಂಧ**

ಚಿತ್ರದುರ್ಗ ಪಾಳೆಯಗಾರರ ಕಾಲದ ಸೈನ್ಯ ವ್ಯವಸ್ಥೆ ಮತ್ತು ಯುದ್ಧ ನೀತಿ : ಒಂದು ಅಧ್ಯಯನ – ಆರ್.ಶಿವಪ್ಪ, ಮಾರ್ಗದರ್ಶಕರು – ಡಾ. ಶಿವಸ್ವಾಮಿ, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ. ೨೦೦೬

**ಪರಾಮರ್ಷನ ಗ್ರಂಥಗಳು**


1. ಕನ್ನಡ ವಿಷಯ ವಿಶ್ವಕೋಶ, ಜಾನಪದ : (ಪ್ರ.ಸಂ) ಡಾ.ಅರವಿಂದ ಮಾಲಗತ್ತಿ, (ಸಂ) ಡಾ.ಡಿ.ಕೆ.ರಾಜೇಂದ್ರ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ೨೦೦೬.
2. ಗಡಿನಾಡ ಕಲೆಗಳು ಮತ್ತು ಜನಪದರ ಸಂಬಂಧಗಳು : ಡಾ.ನೆ.ಮ.ಗಿರಿಜಾಪತಿ, ವಿಸ್ತರಣೆ ಹಾಗೂ ಸಲಹಾ ಕೇಂದ್ರ, ಕರ್ನಾಟಕ ಜಾನಪದ ವಿಶ್ವವಿದ್ಯಾಲಯ, ಗೊಟಗೋಡಿ, ೨೦೧೭.
3. ದಕ್ಷಿಣ ಕರ್ನಾಟಕದ ಜನಪದ ಕಲೆಗಳು : ಡಾ॥ ಚಕ್ಕೆರೆ ಶಿವಶಂಕರ್, ಕರ್ನಾಟಕ ಜಾನಪದ ಪರಿಷತ್ತು, ಬೆಂಗಳೂರು, ೨೦೦೮.
4. ದಕ್ಷಿಣ ಭಾರತೀಯ ಜಾನಪದ ಕೋಶ ಸಂಪುಟ ೧ ಮತ್ತು ೨: (ಪ್ರ.ಸಂ) ಡಾ.ಎ.ಮುರಿಗೆಪ್ಪ, (ಸಂ) ಡಾ.ಸ.ಚಿ.ರಮೇಶ್, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೨೨.